

ನೀರನ್ನು ಉಳಿಸಲು ನಾವೇನು ಮಾಡಬೇಕು?

★ ನೀರನ್ನು ಮಿತವಾಗಿ ಬಳಸುವುದು. ಮನೆಯಲ್ಲಿ ನಲ್ಲಿ ಕೆಟ್ಟು ಹೋಗಿದ್ದು, ಹನಿ ಹನಿ ತೊಟ್ಟಿಕ್ಕುತ್ತಿದ್ದರೆ ಅವನ್ನು ತಕ್ಷಣ ರಿಪೇರಿ ಮಾಡಿಸಿ. ಇಂದಿನ ದಿನಗಳಲ್ಲಿ ಒಂದೊಂದು ಹನಿಯೂ ಅತ್ಯಮೂಲ್ಯ.

★ ಮನೆಯಿಂದ ಹೊರಗೆ ಹೋಗುವಾಗ ಮನೆಯ ಒಳಗಿನ ಎಲ್ಲಾ ನಲ್ಲಿಗಳೂ ಸರಿಯಾಗಿ ಬಂದ್ ಆಗಿವೆಯೇ ಎಂದು ಗಮನಿಸಿ. ಸಣ್ಣ ರಿಪೇರಿ ಇದ್ದರೆ ನಿರ್ಲಕ್ಷಿಸಬೇಡಿ. ಹನಿ ಹನಿ ನೀರು ಪೋಲಾದರೂ ಅದೇ ದೊಡ್ಡ ನಷ್ಟವಾಗುತ್ತದೆ. ಮನೆಯ ನೀರಿನ ಸಂಪ್‌ನ ನಲ್ಲಿಯನ್ನು ಬಂದ್ ಮಾಡಲು ಮರೆಯಬೇಡಿ.

★ ಕಾರು, ಬೈಕು ಮುಂತಾದ ವಾಹನಗಳನ್ನು ತೊಳೆಯಲು ನೀರಿನ ಪೈಪನ್ನು ಬಳಸಬೇಡಿ. ಅದರಿಂದ ಅಗತ್ಯಕ್ಕಿಂತ ಹೆಚ್ಚಿನ ನೀರು ಖರ್ಚಾಗುತ್ತದೆ. ಬದಲಾಗಿ ಬಕೆಟ್ಟಿನಲ್ಲಿ ನೀರು ತೆಗೆದುಕೊಂಡು ಬಂದು ತೊಳೆಯಿರಿ.

★ ಕಡ್ಡಾಯವಾಗಿ ಪ್ರತಿ ಕಟ್ಟಡದಲ್ಲೂ ಮಳೆ ನೀರು ಕೊಯ್ಲು ಅಳವಡಿಸುವುದು

★ ಮನೆ ಕೆಲಸದವರಿಗೆ ಮಿತವಾಗಿ ನೀರು ಬಳಸುವ ಬಗ್ಗೆ ತಿಳಿ ಹೇಳುವುದು.

★ ಕೆರೆಗಳ, ನದಿಗಳ ಮೂಲ ಮಲಿನವಾಗದಂತೆ ಎಚ್ಚರ ವಹಿಸುವುದು

★ ಕಾರ್ಯಾಗಾರಗಳನ್ನು ಹಮ್ಮಿಕೊಂಡು ನೀರಿನ ಸದ್ಬಳಕೆಯ ಬಗ್ಗೆ ತಿಳಿಸುವುದು.

★ ಸಭೆ, ಸಮಾರಂಭಗಳಲ್ಲಿ ಹೆಚ್ಚು ನೀರು ಪೋಲಾಗದಂತೆ ಜಾಗ್ರತೆ ವಹಿಸುವುದು.

★ ಮನೆಯ ಸುತ್ತಮುತ್ತ ಹೆಚ್ಚು ಹೆಚ್ಚು ಮರಗಿಡಗಳನ್ನು ಬೆಳೆಸುವುದು.

★ ನಗರಗಳಲ್ಲಿ ಓಡಾಡುವಾಗ ದಾರಿಯಲ್ಲಿ ಪೈಪು ಒಡೆದು ಹೋಗಿದ್ದರೆ ತಕ್ಷಣ ಆ ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ. 'ಇದು ನಮ್ಮ ಕೆಲಸವಲ್ಲ' ಎಂದು ಉಡಾಫೆ ಮನೋಭಾವ ಬೇಡ. ನೀರು ಪೋಲಾಗುತ್ತಿದ್ದರೆ ಅದನ್ನು ಜಲಮಂಡಳಿ ಸಿಬ್ಬಂದಿಗೆ ತಿಳಿಸುವುದು ನಾಗರಿಕರಾಗಿ ನೀವು ಮಾಡಬೇಕಾದ ಕೆಲಸ.

★ ಕೆಲವೊಮ್ಮೆ ನಮ್ಮ ಕಣ್ಣೆದುರಲ್ಲೇ ನೀರಿನ ಕಳ್ಳತನ ನಡೆಯುತ್ತದೆ. ಯಾವುದೇ ವ್ಯಕ್ತಿಯು ಸಾರ್ವಜನಿಕ ನೀರಿನ ಕೊಳವೆಗಳಿಗೆ ದೊಡ್ಡ ಪೈಪನ್ನು ಅಕ್ರಮವಾಗಿ ಜೋಡಿಸಿ ತನ್ನ ಮನೆಗೆ ಅಧಿಕ ನೀರು ಬರುವಂತೆ ಮಾಡುತ್ತಿದ್ದರೆ ಅಂಥ ವ್ಯಕ್ತಿಯ ವಿರುದ್ಧ ದೂರು ದಾಖಲಿಸಿ.

★ ಬಾಲ್ಯದಿಂದಲೂ ಮಕ್ಕಳಿಗೆ ಅತ್ಯಂತ ಕಡಿಮೆ ನೀರನ್ನು ಉಪಯೋಗಿಸಿ ಸ್ನಾನ ಮಾಡುವುದರ ಬಗ್ಗೆ ಕಲಿಸಿ ಕೊಡಿ.

★ ಬಟ್ಟೆ ಒಗೆದ ನಂತರ ಕಡೆಯ ಬಕೆಟ್ಟಿನ ನೀರನ್ನು ಚೆಲ್ಲಬೇಡಿ. ಸೋಪಿನ ಅಂಶ ಇಲ್ಲದಿದ್ದರೆ ಆ ನೀರನ್ನು ಹೂವಿನ ಗಿಡಗಳಿಗೋ, ಅಂಗಳವನ್ನು ತೊಳೆಯಲೋ ಉಪಯೋಗಿಸಬಹುದು.

★ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಮರುಸಂಸ್ಕರಿಸಿ ಇತರ ಉಪಯೋಗಗಳಿಗೆ ಬಳಸಿಕೊಳ್ಳುವ ಯೋಜನೆಗಳತ್ತ ಗಮನಹರಿಸಿ.

ಇದಿಷ್ಟು ನಾವು ಮುಂದಿನ ಪೀಳಿಗೆಗೆ ನೀಡುವ ಕೊಡುಗೆ. ಎಷ್ಟೇ ವಿಜ್ಞಾನ. ತಂತ್ರಜ್ಞಾನ ಮುಂದುವರೆದರೂ ನೀರನ್ನು ನಾವು ಪ್ರಯೋಗಾಲಯಗಳಲ್ಲಿ ತಯಾರಿಸಲು ಆಗುತ್ತದೆಯೇ? ಪ್ರಕೃತಿ ಮಾತೆ ನಮ್ಮ ಮೇಲಿನ ಮುನಿಸನ್ನು ಬಿಟ್ಟು ಕೃಪೆ ತೋರಿ ಮಳೆ ಸುರಿಸಬೇಕು. ಅದಕ್ಕೆ ಪೂರಕ ವಾತಾವರಣವನ್ನು ನಾವು ಇಲ್ಲಿ ಕಲ್ಪಿಸಿಕೊಡಬೇಕು.

ಸ್ನೇಹಿತರೆ ಇಂದಿನಿಂದಲೇ ಮನಸ್ಸು ಮಾಡಿ, ಶಪಥ ಮಾಡಿ, ನೀರನ್ನು ಮಿತವಾಗಿ ಬಳಸಿ, ಜಲಕ್ಷಾಮ ಬೆಂಗಳೂರಿಗರನ್ನು ತಟ್ಟದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ.

■


